# ಜೆಎಸ್‌ಎಸ್ ಮಹಾವಿದ್ಯಾಪೀಠ
# ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು

# ಶಿವಾನುಭವ ದಾಸೋಹ – 309

**27 ಜನವರಿ 2024 * ಶನಿವಾರ * ಸಂಜೆ 6.00**

**ಸ್ಥಳ : ಶಿವಭವನ, ಶಿವದೇವಾಲಯ, ಎಸ್‌ಬಿಎಂ ಕಾಲೋನಿ**
**ಶ್ರೀರಾಂಪುರ 2ನೇ ಹಂತ, ಅರವಿಂದನಗರ, ಮೈಸೂರು**

---

**ದಿವ್ಯ ಆಶೀರ್ವಾದ**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

**ಅಧ್ಯಕ್ಷತೆ**

**ಶ್ರೀ ಹೆಚ್.ಜಿ. ಪರಶಿವಪ್ಪ**

ಅಧ್ಯಕ್ಷರು, ಶಿವದೇವಾಲಯ ಹಾಗೂ ನಿವೃತ್ತ ಬ್ಯಾಂಕ್ ಅಧಿಕಾರಿಗಳು

**ಉಪನ್ಯಾಸ**

**ಡಾ. ರಾಜಶೇಖರ ಜಮದಂಡಿ**

ಸಾಹಿತಿಗಳು, ಮೈಸೂರು

**ವಿಷಯ : ಹಾವಿನಹಾಳ ಕಲ್ಲಯ್ಯನ ಆಯ್ದ ವಚನಗಳ ವಿಶ್ಲೇಷಣೆ**

**ವಚನ ಗಾಯನ**

**ಪರಂಜ್ಯೋತಿ ಮಹಿಳಾ ಬಳಗ**

ಮೈಸೂರು

---

ಪ್ರಾಯೋಜಕರು

**ವೀರಶೈವ ಸ್ನೇಹ ಬಳಗ (ರಿ)**

ಎಸ್‌ಬಿಎಂ ಕಾಲೋನಿ, ಶ್ರೀರಾಂಪುರ 2ನೇ ಹಂತ, ಅರವಿಂದನಗರ, ಮೈಸೂರು

**ತಮಗೆ ಆದರದ ಸ್ವಾಗತ**

ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೇ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಪ್ರಸಾದನಿಲಯಗಳು ಹಾಗೂ ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಜನತೆಯ ಸರ್ವಾಂಗೀಣ ಉನ್ನತಿಗೆ ಕಾರಣರಾದರು. ಶಿಕ್ಷಣದ ಮೂಲಕವೇ ಸಾಮಾಜಿಕ ಅಭಿವೃದ್ಧಿ ಸಾಧ್ಯ ಎಂಬುದನ್ನು ಅವರು ಮನಗಂಡಿದ್ದರು. ಶ್ರೀಗಳವರು ಜಾತಿ, ಮತ, ಪಂಥ, ಧರ್ಮ ಭೇದವಿಲ್ಲದೆ ಅನ್ನದಾಸೋಹ, ಜ್ಞಾನದಾಸೋಹದ ಜೊತೆಗೆ ಜನತೆಯ ಸಮಗ್ರ ಅಭಿವೃದ್ಧಿಗಾಗಿ, ನೈತಿಕತೆ ಹಾಗೂ ಧಾರ್ಮಿಕತೆಗಳ ಪ್ರಸಾರಕ್ಕಾಗಿ, ಹಲವಾರು ದಶಕಗಳ ಹಿಂದೆಯೇ ಶರಣತತ್ತ್ವ ಪ್ರಸಾರ ಸಮಿತಿಯಂಥ ಸಂಸ್ಥೆಗಳ ಮೂಲಕ ಧರ್ಮದಾಸೋಹವನ್ನು ಪ್ರಾರಂಭಿಸಿದ್ದರು. 1986ರಲ್ಲಿ ಶರಣ ಸಾಹಿತ್ಯ ಪರಿಷತ್ತು ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯನ್ನು ಸ್ಥಾಪಿಸಿ ಆಧ್ಯಾತ್ಮಿಕ ಚಿಂತನೆಗೆ ಹೊಸ ಆಯಾಮವನ್ನು ನೀಡಿದರು.

ಈ ದತ್ತಿಯಡಿಯಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 12.5.1996ರಂದು 'ಶಿವಾನುಭವ ದಾಸೋಹ' ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಅಂದಿನಿಂದಲೂ ಪ್ರತಿ ತಿಂಗಳ ಕೊನೆಯ ಶನಿವಾರದಂದು ಈ ಕಾರ್ಯಕ್ರಮವು ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಧರ್ಮ, ದರ್ಶನ, ವಚನಸಾಹಿತ್ಯ, ಧರ್ಮಗಳ ತೌಲನಿಕ ವಿವೇಚನೆ, ಜೀವನಕಲೆ ಮೊದಲಾದ ವಿಷಯಗಳನ್ನು ಕುರಿತು ಉಪನ್ಯಾಸ ಏರ್ಪಡಿಸಲಾಗುತ್ತಿದೆ.

**ಶ್ರೀ ಹೆಚ್.ಜಿ. ಪರಶಿವಪ್ಪನವರು** ಗುಂಡ್ಲುಪೇಟೆ ತಾಲ್ಲೂಕು ಹುಣಸಿನಪುರದವರು. ಮೈಸೂರು ವಿಶ್ವವಿದ್ಯಾನಿಲಯದ ಬಿ.ಕಾಂ. ಪದವೀಧರರು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ಗುಮಾಸ್ತರಾಗಿ ವೃತ್ತಿ ಆರಂಭಿಸಿ, ನಂತರ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. ನಿವೃತ್ತಿಯ ನಂತರ ಕೃಷಿಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ವೀರಶೈವ ಸ್ನೇಹ ಬಳಗದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಪ್ರಸ್ತುತ ಅಧ್ಯಕ್ಷರಾಗಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಸ್ನೇಹ ಬಳಗದ ವತಿಯಿಂದ ಅನೇಕ ಜನೋಪಯೋಗಿ ಕಾರ್ಯಗಳನ್ನು ಮಾಡುತ್ತಿದ್ದಾರೆ.

**ಡಾ. ರಾಜಶೇಖರ ಜಮದಂಡಿಯವರು** ಮೈಸೂರಿನಲ್ಲಿರುವ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ಸಂಶೋಧಕರಾಗಿದ್ದರು. 20ಕ್ಕೂ ಹೆಚ್ಚು ವರ್ಷ ಕಾಲ ವಿವಿಧ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿದ್ದಾರೆ. 'ವಚನಾವಲೋಕನ', 'ಜಾನಪದ ಸಂಪತ್ತು', 'ಚಾಮರಾಜನಗರ ಜಿಲ್ಲೆಯ ಜಾತ್ರೆ ಮತ್ತು ಹಬ್ಬಗಳು' ಸೇರಿದಂತೆ ಹಲವಾರು ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. ಹಲವಾರು ಸಂಶೋಧನಾ ಯೋಜನೆಗಳಲ್ಲಿ ಸದಸ್ಯರು, ಯೋಜನಾ ಸಹಾಯಕರಾಗಿ ಸೇವೆ ಸಲ್ಲಿಸಿರುವರು. ವಿವಿಧ ನಿಯತಕಾಲಿಕೆಗಳಲ್ಲಿ ಇವರ ಸಂಶೋಧನಾ ಲೇಖನಗಳು ಪ್ರಕಟವಾಗಿವೆ. ಹಲವಾರು ಸಂಘ–ಸಂಸ್ಥೆಗಳ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

**ವೀರಶೈವ ಸ್ನೇಹ ಬಳಗವು** 1993ರಲ್ಲಿ ಮೈಸೂರಿನ ಕುವೆಂಪುನಗರದಲ್ಲಿ ಸ್ಥಾಪನೆಯಾಗಿ ಅನೇಕ ಧಾರ್ಮಿಕ, ಸಾಮಾಜಿಕ ಇತರೆ ಜನೋಪಯೋಗಿ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದೆ. ಹಬ್ಬದ ದಿನಗಳಲ್ಲಿ ವಿಶೇಷ ಪೂಜೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಸಾರ್ವಜನಿಕರ ಉಪಯೋಗಕ್ಕಾಗಿ ಸಮುದಾಯ ಭವನವನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಇಲ್ಲಿರುವ ಕಾರ್ಯಕಾರಿ ಸಮಿತಿಯು ಸಮಾಜದ ಹಿತವನ್ನು ಬಯಸಿ ಕಾರ್ಯನಿರ್ವಹಿಸುತ್ತಿದೆ.